# ಮನೋಭಾವಗಳನ್ನು ತಿದ್ದುವ ಪ್ರಕೃತಿಮಾತೆ

**ಶ್ವೇತಕುಮಾರಿ ಎ.[1] & ವಿಶ್ವನಾಥ[2]**

[1]ಸಂಶೋಧನಾ ವಿದ್ಯಾರ್ಥಿ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

[2]ಪ್ರಾಧ್ಯಾಪಕರು (ನಿ), ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು.

**DOI: https://doi.org/10.5281/zenodo.18116546**

## ABSTRACT:

ಪ್ರಸ್ತುತ ಲೇಖನವು ರಾಷ್ಟ್ರಕವಿ ಕುವೆಂಪು ಅವರ ದೃಷ್ಟಿಯಲ್ಲಿ 'ಪ್ರಕೃತಿ' ಕೇವಲ ಬಾಹ್ಯ ಸೌಂದರ್ಯವಲ್ಲದೆ, ಅದು ಮನುಷ್ಯನ ಮನೋಭಾವಗಳನ್ನು ತಿದ್ದಿ ವ್ಯಕ್ತಿತ್ವ ರೂಪಿಸುವ ಶಕ್ತಿಯಾಗಿದೆ ಎಂಬುದನ್ನು ವಿಶ್ಲೇಷಿಸುತ್ತದೆ. ಕುವೆಂಪು ಅವರ 'ವಿಭೂತಿ ಪೂಜೆ' ಮತ್ತು 'ಇತ್ಯಾದಿ' ಸಂಕಲನಗಳ ಲೇಖನಗಳನ್ನು ಆಧರಿಸಿ, ಪ್ರಕೃತಿಯನ್ನು ಅವರು 'ಜಗತ್ತಿನ ಮಹಾದೇವಾಲಯ'ವಾಗಿ ಮತ್ತು 'ಪರಮಾತ್ಮನ ಚಿನ್ಮಯ ಶರೀರ'ವಾಗಿ ಕಂಡ ಬಗೆಯನ್ನು ಇಲ್ಲಿ ಚರ್ಚಿಸಲಾಗಿದೆ. ಪ್ರಕೃತಿಯನ್ನು ಸಮಷ್ಟಿ ಪ್ರಜ್ಞೆಯಿಂದ ನೋಡುವುದರಿಂದಲೇ ಅವರಲ್ಲಿ 'ವಿಶ್ವಮಾನವ' ತತ್ವ ಮೂಡಿತು ಎಂಬುದು ಲೇಖನದ ಆಶಯ. ಶಿಶುವಿನಿಂದ ವಯಸ್ಕರವರೆಗೆ ಪ್ರಕೃತಿಯು ಹೇಗೆ ಮಮತೆಯ ಗುರುವಿನಂತೆ ಅಧ್ಯಾತ್ಮಿಕ ಮತ್ತು ಮಾನಸಿಕ ನೆಮ್ಮದಿಯನ್ನು ನೀಡುತ್ತದೆ ಎಂಬುದನ್ನು ಈ ಪ್ರಬಂಧವು ಸುಂದರವಾಗಿ ಕಟ್ಟಿಕೊಡುತ್ತದೆ.

## KEYWORDS:

ಕುವೆಂಪು, ಪ್ರಕೃತಿ ದರ್ಶನ, ವಿಶ್ವಮಾನವತೆ, ರಸಋಷಿ, ಸಮಷ್ಟಿ ಪ್ರಜ್ಞೆ.

ಕುವೆಂಪು ಹೆಸರು ಕೇಳಿದ ತಕ್ಷಣವೇ ಅವರ ಪ್ರಕೃತಿಪ್ರೇಮ ಓದುಗರ ಹೃದಯದಲ್ಲಿ ಮೂಡುತ್ತದೆ. ಕುವೆಂಪು ವೈಚಾರಿಕ ಬರಹಗಾರರು, ವಿಮರ್ಶಕರು, ಕವಿ ಮನಸ್ಸಿನವರೂ – ಹೀಗೆಲ್ಲಾ ವಿವಿಧ ವ್ಯಕ್ತಿತ್ವದಿಂದ ಗುರುತಿಸಿಕೊಂಡಿರುವಂತೆ 'ಪ್ರಕೃತಿಕವಿ' ಎಂದೂ ಗುರುತಿಸಲ್ಪಟ್ಟಿದ್ದಾರೆ. ಪ್ರಕೃತಿಯನ್ನು ಕವಿ, ವಿಚಾರವಾದಿ, ವಿಜ್ಞಾನಿ, ಪರಿಸರವಾದಿಗಳು ಭಿನ್ನಭಿನ್ನವಾಗಿ ಪರಿಭಾವಿಸುತ್ತಾರೆ. ಇವರಲ್ಲಿಯೂ ಒಬ್ಬೊಬ್ಬರಿಗೆ ಪ್ರಕೃತಿ ಒಂದೊಂದು ರೀತಿ ಕಾಣುತ್ತದೆ. ಕವಿಗಳಿಗೆ ಪ್ರಕೃತಿ ಒಂದೇ ತರ ಕಂಡಿಲ್ಲ. ಮೊದಲಿಗೆ ಕವಿಗಳೆಲ್ಲ ಒಂದೆ ತೆರನಲ್ಲ. ಪ್ರತಿಯೊಬ್ಬ ಕವಿಯೂ ವಿಶಿಷ್ಟ ವ್ಯಕ್ತಿತ್ವದವ. ಒಬ್ಬೊಬ್ಬನದೂ ಸಂಸ್ಕಾರ ಬೇರೆ, ಬದುಕು ಬೇರೆ, ಜೀವನ ಶೈಲಿ ಬೇರೆ, ಜೀವಿತದ ಉದ್ದೇಶ ಬೇರೆ, ಸ್ವಭಾವ ಸ್ವಧರ್ಮಗಳೂ ಬೇರೆಬೇರೆ, ಆಶೆ, ರುಚಿ, ಅಭಿರುಚಿ, ವಿದ್ಯೆ, ಸಂಸ್ಕೃತಿ ಎಲ್ಲಾ ಬೇರೆಬೇರೆ. ಊರಿಂದೂರಿಗೆ ನಾಡಿನಿಂದ ನಾಡಿಗೆ ದೇಶದಿಂದ ದೇಶಕ್ಕೆ ಈ ವ್ಯಕ್ತಿತ್ವದ ವ್ಯತ್ಯಾಸಗಳು ಹೆಚ್ಚುತ್ತ ಹೋಗುತ್ತವೆ. ಅದರಂತೆ ಪ್ರಕೃತಿಯೂ ವ್ಯತ್ಯಾಸವಾಗುತ್ತದೆ. ಇದರಂತೆ ಕವಿಯಲ್ಲದೆ ವಿಚಾರವಾದಿ, ಪರಿಸರವಾದಿ, ವಿಜ್ಞಾನಿ

ಮುಂತಾದವರಿಗೂ ಇದು ಅನ್ವಯಿಸುತ್ತದೆ.

ಪ್ರಕೃತಿಯೆಂದರೆ ಇಂದ್ರಿಯಗೋಚರವಾದ ಸುಂದರ ನಿಸರ್ಗ ಎಂಬರ್ಥವಿದೆ. ಕಾಡು, ಬೆಟ್ಟ, ಹೊಳೆ, ಕೆರೆ, ಗದ್ದೆ, ಹೊಲ, ಬಯಲು, ಮಲೆ, ಬಾನು, ಬೆಳಗು, ಇರುಳು, ನಕ್ಷತ್ರ, ಹಕ್ಕಿ, ಆಕಾಶ, ಗುಡುಗು, ಮಿಂಚು, ಮಳೆ, ಗಾಳಿ ಇತ್ಯಾದಿ. ಇವೆಲ್ಲವೂ ಕವಿಯ ಮನಸ್ಸಿಗೆ ದರ್ಶನರೂಪದಲ್ಲಿ ಕಾಣಬಹುದು. ವಿವಿಧ ರೂಪಕಗಳನ್ನು ಪಡೆದುಕೊಳ್ಳುತ್ತದೆ. ಅರ್ಧಚಂದ್ರ 'ದೇವರ ಪೆಪ್ಪರಮೆಂಟೇನಮ್ಮ ಗಗನದೊಳಲೆಯುವ ಚಂದಿರನು?' ಎನ್ನುವಂತೆ ಕಲ್ಪನೆ ವಿಭಿನ್ನವಾಗಿರುತ್ತದೆ. ರಸಋಷಿ ಕುವೆಂಪು ಅವರ ಪೂರ್ಣದೃಷ್ಟಿಗೆ ಪ್ರಕೃತಿ ಪರಮಾತ್ಮನ ಚಿನ್ಮಯ ದಿವ್ಯ ಶರೀರವಾಗಿ ತೋರುತ್ತದೆ. ಇಂದ್ರಿಯವ್ಯಾಪಾರಗಳೆಲ್ಲ ಪೂಜೆಯಾಗಿ ಪರಿಣಮಿಸುತ್ತದೆ. ಕುವೆಂಪು ಕವಿಯಾಗಿ ಕಾವ್ಯಗಳಲ್ಲಿ, ಕಾದಂಬರಿಗಳಲ್ಲಿ ಪರಿಭಾವಿಸುವುದಕ್ಕಿಂತ ವಿಭಿನ್ನವಾಗಿ ವಿಚಾರ ಬರಹದಲ್ಲಿ ಪ್ರಕೃತಿಯ ಅಂತರ್ ಮತ್ತು ಬಹಿರ್ ಮುಖಗಳನ್ನು ಚರ್ಚಿಸಿದ್ದಾರೆ.

ಕುವೆಂಪು ಅವರ ಪ್ರಕಾರ "ಪ್ರಕೃತಿ ಇಡೀ ಮಾನವ ಪ್ರಪಂಚಕ್ಕೆ ಮಾತ್ರವಲ್ಲದೆ, ಪ್ರತಿಯೊಬ್ಬ ಮಾನವನ ಜೀವಮಾನಕ್ಕೂ ನಿಕಟಸಂಬಂಧವುಳ್ಳದ್ದಾಗಿದೆ. ಸಮಾಜದ ವಾತಾವರಣವು ಹೇಗೆ ನಮ್ಮ ನಡೆನುಡಿಗಳನ್ನು ಸ್ವಲ್ಪಮಟ್ಟಿಗಾದರೂ ನಿರ್ಣಯಿಸುವುದೊ ಹಾಗೆಯೆ ಪ್ರಕೃತಿಮಾತೆ ನಮಗೆ ತಿಳಿದಂತೆಯೊ ಅಥವಾ ತಿಳಿಯದಂತೆಯೊ ನಮ್ಮ ಮನೋಭಾವನೆಗಳನ್ನು ತಿದ್ದಿ ನಮ್ಮ ವ್ಯಕ್ತಿತ್ವಕ್ಕೆ ಒಂದು ಸ್ವರೂಪವನ್ನುಂಟುಮಾಡುತ್ತಾಳೆ"[1] ಎಂದು ಭಾವಿಸಿದ್ದಾರೆ.

ಕುವೆಂಪು ಅವರು ತಮ್ಮ ವಿಚಾರ ಬರಹದಲ್ಲಿ ಪ್ರಕೃತಿಯನ್ನು ಕುರಿತು ಚರ್ಚಿಸಿದ್ದಾರೆ. 'ವಿಭೂತಿ ಪೂಜೆ' ಎಂಬ ಸಂಕಲನದಲ್ಲಿರುವ 'ಕವಿಯ ದೃಷ್ಟಿಯಲ್ಲಿ ಪ್ರಕೃತಿ' ಮತ್ತು 'ಇತ್ಯಾದಿ' ಎಂಬ ಸಂಕಲನದಲ್ಲಿರುವ 'ಪ್ರಕೃತಿ ಸೌಂದರ್ಯ' – ಎಂಬ ಲೇಖನಗಳೆರಡರಲ್ಲಿ ಪ್ರಕೃತಿಯನ್ನು ಕೇಂದ್ರೀಕರಿಸಿಕೊಂಡು ಚರ್ಚಿಸಿದ್ದಾರೆ. ಆದರೆ ಎಲ್ಲಿಯೂ ಪ್ರಕೃತಿಯ ಸಮಸ್ಯೆಗಳನ್ನು ಚರ್ಚಿಸಿಲ್ಲ.

'ಕವಿಯ ದೃಷ್ಟಿಯಲ್ಲಿ ಪ್ರಕೃತಿ' – ಎಂಬ ಲೇಖನದಲ್ಲಿ ಕವಿಯು ಪ್ರಕೃತಿಯನ್ನು ಭಾವಿಸುವ ದೃಷ್ಟಿಕೋನಗಳನ್ನು ಕುರಿತು ಮಾತನಾಡುತ್ತಾರೆ. ಕವಿಯ ಕಣ್ಣಿಗೆ ಪ್ರಕೃತಿ ಕೇವಲ ಪ್ರಕೃತಿಯಾಗಿ ಕಾಣದೆ 'ದರ್ಶನ'ವಾಗಿ ಕಾಣುತ್ತದೆ. "ಪ್ರಕೃತಿ ವಿಷಯವಾದ ಕವಿಯ ದೃಷ್ಟಿ ಪೂರ್ಣದೃಷ್ಟಿಯಾಗಿ, ಅದು 'ದರ್ಶನ' ಎಂಬ ಹೆಸರಿಗೆ ಅರ್ಹವಾಗಬೇಕಾದರೆ ಕಾಲವೂ ಬೇಕು, ಸಾಧನೆಯೂ ಬೇಕು. ಅರಿತು ಮಾಡಲಿ, ಅರಿಯದೆ ಮಾಡಲಿ ಆ ಸಾಧನೆ ತಪಸ್ಯೆಯ ರೂಪವನ್ನು ತಾಳಿಯೆ ತಾಳುತ್ತದೆ. ಅಂತಹ ಸಹಜ ಯೋಗಸಾಧನೆಯಿಂದ ಕವಿ ದ್ರಷ್ಟಾರನಾದ ರಸಋಷಿಯಾಗಿ ಪೂರ್ಣದೃಷ್ಟಿಯ 'ದರ್ಶನ'ಕ್ಕೇರುತ್ತಾನೆ"[2] – ಎನ್ನುತ್ತಾರೆ.

ಕವಿಗೆ ಪೂರ್ಣದೃಷ್ಟಿಯ ಸಾಕ್ಷಾತ್ಕಾರ ಪ್ರಜ್ಞೆ ಮೂಡುವ ಬಗೆಯನ್ನು ಈ ಲೇಖನದಲ್ಲಿ ಸೋದಾಹರಣವಾಗಿ ವಿವರಿಸುತ್ತಾರೆ. ಕವಿಗೆ ಬಹಿರ್ಮುಖವಾದ

ಬಹಿರಂಗ ಸೌಂದರ್ಯದ ಮೋಹಾಕರ್ಷಣೆ ಅಂತರ್ಮುಖವಾದ ಅಂತರಂಗದ ಸೌಂದರ್ಯದ ಕಡೆಗೆ ತಿರುಗಿ ಉಪಾಸನಾ ರೂಪವನ್ನು ತಾಳುವ ಬಗೆಯನ್ನು ವಿವರಿಸುತ್ತಾರೆ. ಕವಿಪ್ರಜ್ಞೆಗೆ ಪ್ರಕೃತಿ ಸತ್ಯ ಅನ್ವೇಷಣೆಯಂತೆ, ಪ್ರಕೃತಿಯಾರಾಧನೆಯೆ ಪರಮನಾರಾಧನೆಯಾಗುವಂತೆ, ಪ್ರಕೃತಿಯೊಲ್ಮೆಯ ಮುಕ್ತಿಯಾನಂದ ಸಾಧನೆಯಾಗುವಂತೆ ಕಾಣುತ್ತದೆ ಎನ್ನುತ್ತಾರೆ ಕುವೆಂಪು ಅವರು.

"ಪ್ರಕೃತಿಯನು ಬ್ರಹ್ಮಮಯಿ ಎಂದರಿತು ಒಲಿದವಗೆ ಮೇಣು ಆನಂದಮಯಿ ಎಂದೊಲಿದು ಅರಿತವಗೆ ದುಗುಡವೆತ್ತಣದು?...[3] – ಎಂಬ ಒಂದು ಶ್ರದ್ಧೆ, ಧೈರ್ಯ, ಶಾಂತಿ ಹೃದಯವನ್ನು ತುಂಬುತ್ತದೆ. ಅಂತಹ ರಸದೃಷ್ಟಿಗೆ ಸ್ಥೂಲವಾದುದೂ ಜಡವಾದುದೂ ಸಚ್ಚಿದಾನಂದವಾಗಿ ತೋರತೊಡಗುತ್ತದೆ ಎಂಬುದು ಕುವೆಂಪು ಅವರ ಅಭಿಮತವಾಗಿದೆ.

'ಪ್ರಕೃತಿ ಸೌಂದರ್ಯ' – ಎಂಬ ಲೇಖನ 1926 ರಲ್ಲಿ ಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನ. ಈ ಲೇಖನದ ಆರಂಭದಲ್ಲಿಯೂ 'ಪ್ರಕೃತಿ' – ಎಂಬ ಅರ್ಥಕಲ್ಪನೆಯನ್ನು ವಿವರಿಸಿದ್ದಾರೆ. ಈ ಅರ್ಥಕಲ್ಪನೆಯೇ ಸುಂದರವಾಗಿದೆ.

"......ಸಾಮಾನ್ಯವಾಗಿ ಸಾಹಿತ್ಯದಲ್ಲಿ 'ಪ್ರಕೃತಿ' ಎಂದರೆ ವ್ಯಕ್ತ ಪ್ರಕೃತಿ–ಕಣ್ಣಿಗೆ ತೋರುವ ಬಾಹ್ಯಪ್ರಕೃತಿ ಎಂದರ್ಥವಿದೆ. ಪರ್ವತಶೃಂಗಗಳಿಂದ ಹರಿದುಬರುವ ತಿಳಿನೀರಿನ ತರಂಗಿಣಿಗಳೂ, ಮನೋರಂಜಕವಾದ ಹಸುರು ಪತ್ರಗಳಿಂದ ಆಚ್ಛಾದಿತವಾದ ರಮ್ಯ ಅರಣ್ಯಗಳೂ, ವಿಶ್ವಮಾತೆಯ ಕಂಗಳ ನೀಲಕಾಂತಿಯೊ ಎಂಬಂತೆ ತೋರುವ ಆಕಾಶವೂ, ಜಲಧಿಯ ಮಹಾತರಂಗಗಳಂತೆ ದಿಗಂತಪರ್ಯಂತ ಪಸರಿಸಿರುವ ಗಿರಿಗಳೂ, ಉದಯಿಸುತ್ತಿರುವ ರವಿಯ ಕಿರಣಗಳನ್ನು ಪ್ರತಿಬಿಂಬಿಸಿ ನಲಿಯುವ ಸರೋವರಗಳೂ, ಮನಸ್ಸನ್ನು ಮೋಹಗೊಳಿಸುವ ಹಸುರಾದ ಪೈರುಗಳಿಂದ ತುಂಬಿದ ಹೊಲಗದ್ದೆಗಳೂ, ಮೃದುಮಧುರವಾದ ಗಾಯನದಿಂದ ಕಠಿನ ಹೃದಯಗಳನ್ನು ಕೂಡ ಕರಗಿಸುವ ವಿಹಂಗಗಳೂ, ಅಡವಿ ಹೊಲಗದ್ದೆಗಳಲ್ಲಿ ಸ್ವೇಚ್ಛೆಯಾಗಿ ತಿರುಗಾಡುವ ಜಿಂಕೆ ನವಿಲು ಮೊದಲಾದ ಜೀವಜಂತುಗಳೂ – ಇವೇ ಮೊದಲಾದುವುಗಳ ಸಮುದಾಯಕ್ಕೆ 'ಪ್ರಕೃತಿ' ಎಂದರ್ಥ. ಇವುಗಳ ಪೃಥಕ್ತ್ವಕ್ಕೆ ಪ್ರಕೃತಿ ಎಂದರ್ಥವಲ್ಲ. ಇವುಗಳ ಏಕತ್ವಕ್ಕೆ (ಸಮಷ್ಟಿ) ಪ್ರಕೃತಿ ಎಂದರ್ಥ"[4].

ಪ್ರಕೃತಿಯ ಬಗೆಗಿನ ಈ ವ್ಯಾಖ್ಯಾನ ಅದ್ಭುತವಾಗಿದೆ. ಪ್ರಕೃತಿಯನ್ನು ಸಮಷ್ಟಿ ಪ್ರಜ್ಞೆಯಿಂದ ನೋಡುವ ಕುವೆಂಪು ಅವರ ಮನಸ್ಸಿನಲ್ಲಿ ಪ್ರಕೃತಿ ಎಂದರೆ ಎಲ್ಲವನ್ನೂ ಸಮಾನ ನೆಲೆಯಲ್ಲಿ ಒಳಗೊಂಡಿರುವುದು ಎಂದರ್ಥ. ಈ ಭಾವ ಪರಿಣಾಮವೇನೋ ವಿಶ್ವಮಾನವತೆಯ ಪ್ರಜ್ಞೆ ಅಚಲವಾಗಿ ಕುವೆಂಪು ಅವರಲ್ಲಿ ಮೂಡಿರುವುದು. ಈ ಪ್ರಕೃತಿಯಲ್ಲಿ ಯಾವುದು ಮೇಲಲ್ಲ ಕೀಳಲ್ಲ. ಪ್ರತಿಯೊಂದುಕ್ಕೂ ಅದರದೇ ಆದ ಶಕ್ತಿ ಸಾಮರ್ಥ್ಯಗಳಿವೆ. ಸ್ವತಂತ್ರವಾಗಿ ಬದುಕುವ ಹಕ್ಕಿದೆ. ಅದನ್ನೇ ಈ ಪ್ರಕೃತಿ ವ್ಯಾಖ್ಯಾನದಲ್ಲಿ ಕುವೆಂಪು ಪರೋಕ್ಷವಾಗಿ ವಿವರಿಸುತ್ತಿದ್ದಾರೆ.

ಪ್ರಕೃತಿ ನಮ್ಮ ಮನೋಭಾವಗಳನ್ನು ತಿದ್ದುವ ನಮ್ಮ ವ್ಯಕ್ತಿತ್ವಕ್ಕೆ ಒಂದು ಸ್ವರೂಪವನ್ನು ನೀಡುವ ಶಕ್ತಿಯಿದೆ ಎಂಬ ಕುವೆಂಪು ಅವರ ಕಲ್ಪನೆ ಅಥವಾ ಭಾವನೆಯೇ ಅಥವಾ ನಂಬಿಕೆಯೇ ಅತ್ಯದ್ಭುತವಾಗಿದೆ. ಇದು ಸತ್ಯವೂ ಹೌದು. ಹುಟ್ಟಿದ ಶಿಶುವಿಗೆ ಮೊದಲನೆಯ ವಾತಾವರಣವೇ ಪ್ರಕೃತಿ. ಆಕೆಯೇ ಪ್ರತಿಯೊಂದು ಮಗುವಿಗೂ ಮುಗ್ಧವಾದ ಗುರು. ಕುವೆಂಪು ಅವರು ಪ್ರಕೃತಿಯನ್ನು ಸ್ತ್ರೀರೂಪದಲ್ಲಿ ಕಲ್ಪಿಸಿಕೊಳ್ಳುತ್ತಾರೆ. ಆಕೆಯ ಎಷ್ಟೋ ಉಪದೇಶಗಳನ್ನು ಶಿಶು ಕಲಿತು, ಸಂಗ್ರಹಿಸಿ, ಮನನ ಮಾಡಿಕೊಳ್ಳುತ್ತಾ ಪ್ರವರ್ಧನಮಾನವಾಗುತ್ತದೆ. ಅದರಿಂದಲೇ ಮಕ್ಕಳು ಬಾಲ್ಯದಲ್ಲಿ ತಂದೆ ತಾಯಿಗಳ ಮಾತುಗಳನ್ನು ಒಂದೆಡೆಗಿಟ್ಟು, ಶಿಕ್ಷಕರ ಭಯವನ್ನು ಲಕ್ಷಿಸದೆ, ವಾತಾವರಣದ ಅಪಾಯಗಳನ್ನೂ ಧಿಕ್ಕಾರಮಾಡಿ ಪ್ರಕೃತಿಮಾತೆಯೊಡನೆ ಆಟಕ್ಕೆ ಹೋಗುವುದು. ಮಕ್ಕಳ ಹೃದಯವನ್ನು ಯಾವುದೋ ಒಂದು ಗೂಢವಾದ ಮತ್ತು ಬಲವತ್ತರವಾದ ವಾತ್ಸಲ್ಯ ಲಹರಿ ಆವರಿಸಿ ಪ್ರಕೃತಿದೇವಿಯ ಕಡೆಗೆ ಎಳೆಯುವುದು. ಮಗು ತನ್ನ ತಾಯಿಯನ್ನು ಸಹಜವಾಗಿ ಪ್ರೀತಿಸುವಂತೆ ಪ್ರಕೃತಿಯನ್ನು ಅಷ್ಟೇ ಸಹಜವಾಗಿ ಪ್ರೀತಿಸುತ್ತದೆ ಎಂದು ಕುವೆಂಪು ಅವರು ನಿರೂಪಿಸುತ್ತಾರೆ. ಇದು ಕೇವಲ ಮಕ್ಕಳಿಗೆ ಅನ್ವಯಿಸುವುದು ಇಲ್ಲ. ಬೆಳೆದ ಮಾನವರು ಎಲ್ಲಾ ಜಂಜಾಟಗಳಿಂದ ದೂರವಾಗುವುದಕ್ಕೆ ಮತ್ತೆ ಪ್ರಕೃತಿ ಮಾತೆಯ ಮಡಿಲನ್ನು ಬಯಸುತ್ತಾನೆ. ಅಲ್ಲಿ ಸುಖ, ನೆಮ್ಮದಿಯ ಭಾವವನ್ನು ಅನುಭವಿಸುತ್ತಾನೆ. ತನ್ನ ಎಲ್ಲಾ ರಾಗ–ಅನುರಾಗ–ವಿಕಾರಗಳೆಲ್ಲವನ್ನೂ ಈ ಪ್ರಕೃತಿ ಮಾತೆಯ ಮಡಿಲಿನಲ್ಲಿ ತೋರಿ ಹಗುರಾಗುತ್ತಾರೆ.

ಮಗುವಿನಿಂದ ವಯಸ್ಕರರಿಗೂ ಪ್ರಕೃತಿಸೌಂದರ್ಯಾನುಭೂತಿ ಬೇಕು. ಅದನ್ನು ನಾವೆಲ್ಲರೂ ಪಡೆದುಕೊಳ್ಳುವುದಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನಿಸುತ್ತಿರುತ್ತೇವೆ. ಈ ಪ್ರಕೃತಿಸೌಂದರ್ಯಾನುಭವ – ಪ್ರಕೃತಿಸೌಂದರ್ಯಾನುಭೂತಿಯು ಪ್ರತಿಯೊಬ್ಬನ ಆತ್ಮಕಲ್ಯಾಣಕ್ಕೂ ಅತ್ಯಾವಶ್ಯಕವಾದುದು. ಜಗತ್ತೇ ಒಂದು ಮಹಾದೇವಾಲಯವಿದ್ದಂತೆ, ನಾವು ದೇವಾರಾಧನೆಗೆ ಬಂದ ಭಕ್ತರು. ಸನ್ನಿವೇಶದ ಸಂಸ್ಕಾರದಿಂದ ನಮ್ಮ ಧ್ಯೇಯವು ಮರೆಯಾಗಿ ಹೋಗಿರಬಹುದು. ಆದರೂ ಈ ಜಗತ್ತು ಎಂಬ ದೇವಾಲಯದಿಂದ ಹೊರಗೆ ಹೋಗುವುದರೊಳಗಾಗಿ, ಒಂದು ಸಲವಾದರೂ, ದೇವರ ದರ್ಶನವಾಗದಿರುವುದಿಲ್ಲ. ಈ ದರ್ಶನವನ್ನು ಪಡೆಯುವುದಕ್ಕೆ ಮಾನವನ ಮನಸ್ಸು ಅವನಿಗೆ ಅರಿವಿಲ್ಲದೆ ಬಯಸುತ್ತಾ ಇರುತ್ತದೆ ಎಂದು ಕುವೆಂಪು ಅವರು ಭಾವಿಸುತ್ತಾರೆ. ಅವರ ಈ ಕಲ್ಪನೆ ಅಮೋಘವಾಗಿದೆ. ಈ ಜಗತ್ತು–ಪ್ರಕೃತಿಯನ್ನೇ ಮಹಾದೇವಾಲಯವಾಗಿ ಕಲ್ಪಿಸಿಕೊಳ್ಳುವ ಅವರ ಭಾವಕಲ್ಪನೆ ಸಾಹಿತ್ಯ–ಸಂಸ್ಕೃತಿಯಲ್ಲಿಯೇ ಮೊದಲಿಗೆ ಅನ್ನಬಹುದು. ಎಲ್ಲಾ ದೇವಸ್ಥಾನಗಳಲ್ಲಿ ಇರುವಂತೆ ಈ ಜಗತ್ತಿನಲ್ಲಿ ಕಡಲಿನಂತಹ ಪಂಚಪಾತ್ರೆ ಇದೆ, ಆಕಾಶದಂತಹ ಗೋಪುರವಿದೆ, ಸೂರ್ಯ ಚಂದ್ರ ತಾರೆಗಳಂತಹ ದೀಪಗಳಿವೆ, ಮಾನವರಂಥ ಸಜೀವರಾದ, ಪ್ರೇಮಮಯರಾದ, ಸಮಯಕ್ಕೊದಗುವ ವಿಗ್ರಹಗಳಿವೆ, – ಹೀಗೆ ಕುವೆಂಪು ಅವರು ಪ್ರಕೃತಿಯನ್ನು ಒಂದು ಸುಂದರವಾದ ಮಹಾದೇವಾಲಯವಾಗಿ ಕಲ್ಪಿಸಿಕೊಂಡು ಅದರ ಇರುವಿಕೆ ಮತ್ತು ಶ್ರೇಷ್ಠತೆಯನ್ನು ವಿವರಿಸುತ್ತಾರೆ. ಈ ಬಲವಾದ ನಂಬಿಕೆ,

ಕಲ್ಪನೆ ಮತ್ತು ತತ್ವವೇ ಅವರ ಸೃಜನಾತ್ಮಕ ಸಾಹಿತ್ಯದಲ್ಲಿಯೂ ಪ್ರತಿಬಿಂಬಿತವಾಗಿದೆ.

**ಕೊನೆ ಟಿಪ್ಪಣಿಗಳು:**

1. ಶಿವಾರೆಡ್ಡಿ ಕೆ.ಸಿ. (ಸಂ), (2003), ಕುವೆಂಪು ಸಮಗ್ರ ಗದ್ಯ, ಸಂಪುಟ–1, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಪು.ಸಂ. 574
2. ಅದೇ, ಪು.ಸಂ. 287
3. ಅದೇ, ಪು.ಸಂ. 573
4. ಅದೇ, ಪು.ಸಂ. 774

**ಪರಾಮರ್ಶನ ಗ್ರಂಥಗಳು:**

1. ಶಿವಾರೆಡ್ಡಿ ಕೆ.ಸಿ. (ಸಂ), (2003), ಕುವೆಂಪು ಸಮಗ್ರ ಗದ್ಯ, ಸಂಪುಟ–1, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಶಿವಾರೆಡ್ಡಿ ಕೆ.ಸಿ. (ಸಂ), (2003), ಕುವೆಂಪು ಸಮಗ್ರ ಗದ್ಯ, ಸಂಪುಟ–2, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ರಾಘವೇಂದ್ರರಾವ್ ಎಚ್.ಎಸ್., (1995), ಹಾಡೆ ಹಾದಿಯ ತೋರಿತು, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಕಾಲೇಜು.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.